**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –4

**CC No**: 41/2020 ಚಾಸ– 7

| | |
|---|---|
| ಹೆಸರು | **ಮಂಜುನಾಥ** |
| ತಂದೆಯ ಹೆಸರು | **ಚಿಕ್ಕಯ್ಯ** |
| ವಯಸ್ಸು | **43 ವರ್ಷ** |
| ಉದ್ಯೋಗ | **ವ್ಯವಸಾಯ** |
| ವಾಸಸ್ಥಳ | **ದೇವರ ಮುದ್ದನ ಹಳ್ಳಿ ಗ್ರಾಮ** |

ದಿನಾಂಕಃ 24.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ–**

ನನಗೆ ಚಾಸಾ 6 ರವರ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿ ದಿಃ 07.11.2020 ರಲ್ಲಿ ಮಹಜರ್ ಅಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 5 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ಸುಮಾರು 5–6 ವರ್ಷಗಳ ಹಿಂದೆ ನಾನು ನಮ್ಮೂರಿನ ಬಸ್ ಸ್ಟಾಂಡ್ ಅಲ್ಲಿ ನಿಂತಿದ್ದಾಗ ಪೊಲೀಸರು ನಿಪಿ 5 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ನಿಪಿ 5 ಅನ್ನು ಯಾವಾಗ, ಎಲ್ಲಿ ಮತ್ತು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀಸವಾಲು ಸ.ಸ.ಅಭಿಯೋಜಕರಿಂದಃ**

ದಿಃ 07.01.2020 ರಂದು ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ನನ್ನನ್ನು ಮತ್ತು ಚಾಸಾ 6 ರವರನ್ನು ಪೊಲೀಸರು ಸ್ಥಳ ಮಹಜರಿಗೆ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಒಪ್ಪಿ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಆಗ ಪೊಲೀಸರು ಘಟನಾ ಸ್ಥಳಕ್ಕೆ 2 ನೇ ಆರೋಪಿಯನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿ ತಾನು ಚಾಸಾ 1 ರವರ ಕೊಟ್ಟಿಗೆಯಿಂದ 5 ಕುರಿ ಮತ್ತು 5 ಕುರಿ ಮರಿಗಳನ್ನು ಕಳ್ಳತನ ಮಾಡಿಕೊಂಡು, ಕಾರ್ ಸಂಖ್ಯೆ ಕೆ ಎ 09- ಎನ್ 1703 ಹಾಗೂ ಕೆ ಎ 04- ಎಂ ಸಿ 0800 ದಲ್ಲಿ ಹಾಕಿಕೊಂಡು ಅರಕಲಗೂಡಿನ ಎತ್ತಗುಂಡನ ಹಳ್ಳಿ ಸಂತೆಯಲ್ಲಿ 25 ಸಾವಿರ ರೂಗಳಿಗೆ ಮಾರಾಟ ಮಾಡಿ ಹಣವನ್ನು ಸಮನಾಗಿ ಹಂಚಿಕೊಂಡೆವು ಎಂದು ತಿಳಿಸಿದ ಎಂದರೆ ಸರಿಯಲ್ಲ. ತಾನು ಕಳ್ಳತನ ಮಾಡಿದ ಚಾಸಾ 1 ರವರ ಕೊಟ್ಟಿಗೆಯನ್ನು 2 ನೇ ಅರೋಪಿ ಪೊಲೀಸರಿಗೆ ತೋರಿಸಿದ್ದು, ಆ ಸಮಯಕ್ಕೆ ನಾನು ಮತ್ತು ಚಾಸಾ 6 ರವರು ಹಾಜರಿದ್ದೆವು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ತನಿಖಾಧಿಕಾರಿ ಬೆಳಗ್ಗೆ 7-30 ರಿಂದ 7-45 ರವರಿಗೆ ನಿಪಿ 5 ರಂತೆ ಮಹಜರ್ ಬರೆದು ನನಗೆ ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ . ಈ ಕುರಿತು ನಾನು ಈಗ ನನಗೆ ಓದಿ ಹೇಳಿದಂತೆ ನಾನು ------------- ದಿಂದ ನೋಡಿದರೆ ಗುರುತಿಸುತ್ತೇನೆ ಎನ್ನುವವರೆಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ

ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.